ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	760 (768)
ಸದಸ್ಯರ ಹೆಸರು:	ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ:	20-12-2021
ಉತ್ತರಿಸುವವರು:	ಮಾನ್ಯ ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕೊಡಗು ಜಿಲ್ಲೆಯಲ್ಲಿ, ಅರಣ್ಯ ಇಲಾಖೆಗೆ ಮಂಜೂರಾಗಿರುವ, ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳೇನು;	ಕೊಡಗು ಜಿಲ್ಲೆಯಲ್ಲಿ ಮಂಜೂರಾಗಿರುವ, ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಅರಣ್ಯ ಸಂರಕ್ಷಣಾಧಿಕಾರಿ	1	1	-
2	ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ)	1	-	1
3	ಉಪ ಅರಣ್ಯ ಸಂರಕ್ಷಣಾಧಿಕಾರಿ	6	5	1
4	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	9	7	2
5	ಪತ್ರಾಂಕಿತ ವ್ಯವಸ್ಥಾಪಕರು	2	2	-
6	ವಲಯ ಅರಣ್ಯಾಧಿಕಾರಿ	27	21	6
7	ಸಹಾಯಕ ಸಾಂಖ್ಯಿಕ ಅಧಿಕಾರಿ	1	1	-
8	ಅಧೀಕ್ಷಕರು	6	3	3
9	ಪ್ರಥಮ ದರ್ಜೆ ಸಹಾಯಕರು	29	20	9
10	ದ್ವಿತೀಯ ದರ್ಜೆ ಸಹಾಯಕರು	30	8	22
11	ಉಪ ವಲಯ ಅರಣ್ಯಾಧಿಕಾರಿ	133	122	11
12	ಅರಣ್ಯ ರಕ್ಷಕ	174	120	54
13	ಅರಣ್ಯ ವೀಕ್ಷಕ	38	23	15
14	ಶೀಘ್ರಲಿಪಿಗಾರರು	1	-	1
15	ಆಕೃತಿ ರಚನೆಕಾರರು ಗ್ರೇಡ್-1	1	-	1
16	ಆಕೃತಿ ರಚನೆಕಾರರು ಗ್ರೇಡ್-2	1	-	1
17	ಪೊಲೀಸ್ ಕಾನ್ಸ್‌ಟೇಬಲ್	2	-	2
18	ವಾಹನ ಚಾಲಕರು	9	1	8
19	ಕೇರ್ ಟೇಕರ್	5	1	4
20	ಆನೆ ಜಮೇದಾರ	2	-	2
21	ಆನೆ ಮಾವುತ	27	14	13
22	ಆನೆ ಕಾವಾಡಿಗ	27	23	4
23	ಡಿ ಗ್ರೂಪ್	38	24	14
24	ಜಮೇದಾರ	1	-	1
25	ಬೆರಳಚ್ಚುಗಾರರು	4	-	4
26	ಪರಿಚಾರಕರು	1	-	1
27	ಲಾರಿ ಕ್ಲೀನರ್	1	-	1
28	ಮಾಲಿ	1	-	1
	ಒಟ್ಟು	**578**	**396**	**182**

ಕ್ರ. ಸಂ.	ಪ್ರಶ್ನೆ	ಉತ್ತರ
(ಆ)	ಜಿಲ್ಲೆಯಲ್ಲಿ ಮಾನವ-ವನ್ಯಜೀವಿ ಸಂಘರ್ಷ ನಿರಂತರವಾಗಿ ವರದಿಯಾಗಿರುತ್ತಿರುವ ಹಿನ್ನಲೆಯಲ್ಲಿ, ಜಿಲ್ಲೆಗೆ ಹೆಚ್ಚುವರಿಯಾಗಿ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ;	ಪ್ರಸ್ತುತ ಅಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
(ಇ)	ಜಿಲ್ಲೆಯಲ್ಲಿ, ನಿರಂತರ ಮಾನವ-ವನ್ಯಜೀವಿ ಸಂಘರ್ಷದ ಹಿನ್ನಲೆಯಲ್ಲಿ ಇಲಾಖೆಗೆ ಅತ್ಯಗತ್ಯವಾಗಿರುವ ಆಧುನಿಕ ಸಂಪರ್ಕ ಸಾಧನಗಳು, ಕಛೇರಿಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ? (ವಿವರ ನೀಡುವುದು)	ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡ ಅತ್ಯಗತ್ಯವಾದ ಅಧುನಿಕ ಸಂಪರ್ಕ ಸಾಧನ, ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ಈ ಕೆಳಕಂಡಂತೆ ಕಲ್ಪಿಸಲಾಗಿದೆ. 1. ಆಧುನಿಕ ಸಂಪರ್ಕ ಸಾಧನಗಳಾದ ಜಿ.ಪಿ.ಎಸ್, ವೈರ್ ಲೆಸ್ ಡ್ರೋನ್, ಬಂದೂಕು, ವಾಕಿಟಾಕಿ, ಬೈನಾಕ್ಯೂಲರ್, ಕ್ಯಾಮರಾ ಟ್ರ್ಯಾಪ್, ಚೈನ್-ಸಾ ಹಾಗೂ ಟಾರ್ಚ್ ಗಳನ್ನು ಇಲಾಖಾ ಸಿಬ್ಬಂದಿಗಳಿಗೆ ಒದಗಿಸಲಾಗಿದೆ. 2. ಕ್ಷಿಪ್ರ ಕಾರ್ಯಪಡೆ ತಂಡಗಳ ರಚನೆ, ಕಾಡಾನೆ ಹಿಮ್ಮೆಟ್ಟಿಸುವ ತಂಡ ರಚನೆ ಮಾಡಿದ್ದು, ವಾಹನ ಸೌಕರ್ಯ ಒದಗಿಸಲಾಗಿದೆ. 3. ಕಳ್ಳಬೇಟೆ ತಡೆ ಶಿಬಿರಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಿಬಿರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮೂಲ ಭೂತ ಸೌಕರ್ಯಗಳಾದ ಕಟ್ಟಡ, ನೀರು ಮತ್ತು ಶೌಚಾಲಯಗಳು, ಅಲ್ಲದೆ, ಶಿಬಿರದ ಕಟ್ಟಡಕ್ಕೆ ವಿದ್ಯುತ್ ಸೌಕರ್ಯ/ಸೋಲಾರ್ ದೀಪಗಳನ್ನು ಅಳವಡಿಸಲಾಗಿದೆ. ಸದರಿ ಕಳ್ಳಬೇಟೆ ತಡೆ ಶಿಬಿರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಆಹಾರ ಭತ್ಯೆ, ಸಮವಸ್ತ್ರ, ರೈನ್ ಕೋಟ್, ಶೂಸ್ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.

ಕಡತ ಸಂಖ್ಯೆ: ಅಪಜೀ 295 ಅಅಸೇ 2021

(ಉಮೇಶ ವಿ.ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.